NEWS CODE
As local as your pincode

# ಧಾರವಾಡ: ನೀರಿನ ಉಪಯೋಗಕ್ಕೆ ಸೂಕ್ತ ಯೋಚನೆ, ಯೋಜನೆ ಅವಶ್ಯಕ- ಡಾ ಟಿ.ವಿ.ರಾಮಚಂದ್ರ

ಧಾರವಾಡ: ನೀರು ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದ್ದು, ಜಲ ಮೂಲಗಳ ಉಪಯೋಗವನ್ನು ಸೂಕ್ತ ಯೋಚನೆ ಮತ್ತು ಯೋಜನೆಗಳೊಂದಿಗೆ ಕಾರ್ಯಗತ ಮಾಡಬೇಕಾಗಿರುವ ಅಗತ್ಯತೆ ಇದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಡಾ ಟಿ.ವಿ.ರಾಮಚಂದ್ರ ತಿಳಿಸಿದರು.




ನಗರದ ಇನ್ಸ್ಟಿಟ್ಯೂಶನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ನೀರಿನ ಗುಣಮಟ್ಟದ ನಿರ್ವಹಣೆ ಕುರಿತ ಅಖಿಲ ಭಾರತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ನೀರಿನ ಮೂಲಗಳು ಮತ್ತು ವಿವಿಧೋದ್ದೇಶಗಳ ಬಳಕೆ ಮಾಡುವಾಗ ಎಲ್ಲರೂ ಹೆಚ್ಚು ಕಾಳಜಿ ವಹಿಸಬೇಕು. ನೀರನ್ನು ಸೂಕ್ತವಾಗಿ ಬಳಸುವುದು ನಮ್ಮ ಹಕ್ಕು. ನೀರನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗಳಿಗೆ ಸಿಗುವಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ ಕೂಡಾ ಆಗಿದೆ ಎಂದರು.

## *ಹುನಗುಂದ: ಸೂಳೆಭಾವಿ ಗ್ರಾಮಕ್ಕೆ ಕುಡಿಯುವ ನೀರಿನ ಪೈಪ್ ಲೈನ್ ವ್ಯವಸ್ಥೆ ಮಾಡುವಂತೆ ಆಗ್ರಹ*

ನೀರಿನ ನಿರ್ವಹಣೆಯಲ್ಲಿ ಜಲಮೂಲಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳ ವಿಶ್ಲೇಷಣೆ ಸಮರ್ಪಕವಾಗಿದ್ದರೆ ಮಾತ್ರ ನೀರಿಗೆ ಸಂಬಂಧಿಸಿದ ಯೋಜನೆಗಳು ಸಫಲವಾಗಬಲ್ಲವು. ಈ ನಿಟ್ಟಿನಲ್ಲಿ ಸಂಶೋಧನೆ ತ್ವರಿತಗತಿಯಲ್ಲಿ ಆಗಬೇಕು ಮತ್ತು ಕೈಗೆಟಕುವ ಸಂಶೋಧನಾ ಫಲಿತಾಂಶಗಳ ಪಾತ್ರವು ಕೂಡ ಬಹು ಮುಖ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಇಂ. ಎಂ ನಾರಾಯಣ, ಜಗದೀಶ, ಪ್ರೊ.ಎಂ ಆರ್ ಪ್ರಾಣೇಶ, ಡಾ. ವೈಭವ ಚಾಟೆ, ಡಾ.ಆನಂದ ಶಿವಾಪೂರ, ಡಾ.ಪ್ರಕಾಶ ಕಲಬುರಗಿ, ಡಾ.ಪುರಂಧರ, ಡಾ. ರಮೇಶ ಚಕ್ರಸಾಲಿ ಉಪಸ್ಥಿತರಿದ್ದರು.